ದಿನಾಂಕ 23-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ವಿ.ಎಸ್.ಎನ್. ವಕೀಲರಿಂದ

10. ಮೊದಲು ಈ ಪ್ರಕರಣದ ದೂರನ್ನು ರಾಜಣ್ಣ ತಿಮ್ಮಣ್ಣ ನಾಯಕ ರವರು ದಾಖಲಿಸಿದ್ದರು. ಅವರು ಈ ಪ್ರಕರಣ ಸುಳ್ಳು ಪ್ರಕರಣ ಎಂದು ಗೊತ್ತಾಗಿ ಬರದೆ ಇರುವುದರಿಂದ ನನಗೆ ಅಧಿಕಾರ ನೀಡಿ ನಾನು ಈಗ ಸಾಕ್ಷಿ ಹೇಳಲು ಬಂದಿರುವುದು ಎಂದರೆ ಸಾಕ್ಷಿ ಅವರ ಅನಾರೋಗ್ಯದಿಂದ ನಾನು ಬಂದಿದ್ದೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಪೂರ್ಣ ಮಾಹಿತಿ ನನಗಿದೆ. ನಮ್ಮ ಸಂಸ್ಥೆಯಲ್ಲಿ ಸಾಲ ಕೊಡುವಾಗ ಯಾವ ಯಾವ ಪದ್ಧತಿ ಅನುಸರಿಸುತ್ತಾರೆ ಎಂದು ನನಗೆ ಗೊತ್ತಿದೆ. ಸಾಮಾನ್ಯವಾಗಿ ನಮ್ಮ ಸಂಸ್ಥೆಯಲ್ಲಿ ಮೊದಲು ಸದಸ್ಯತನ ಮಾಡುತ್ತಾರೆ ಎಂದರೆ ಸರಿ. ಆರೋಪಿಯು ಪ್ರಪ್ರಥಮವಾಗಿ ನಮ್ಮ ಸಂಸ್ಥೆಯಲ್ಲಿ ಸದಸ್ಯತ್ವ ಪಡೆಯಲು ಯಾವ ದಿನಾಂಕದಂದು ಅರ್ಜಿ ಕೊಟ್ಟದ್ದು ಎಂದು ನನಗೆ ದಾಖಲೆ ನೊಡದೆ ಹೇಳಲಾಗುವುದಿಲ್ಲ. ಮೊದಲೆ ಸದಸ್ಯಾಗಿರುವ ಇಬ್ಬರು ಹೊಸ ಸದಸ್ಯರನ್ನು ಮಾಡುವಾಗ ಪರಿಚಯಿಸಬೇಕಾಗುತ್ತದೆ ಎಂದರೆ ಸರಿ. ಆರೋಪಿಯನ್ನು ಪರಿಚಯಿಸಿರುವವರ ಹೆಸರು ಸಚಿನ್ ರಾಧಕೃಷ್ಣ ಅಸ್ನೋಟಿಕರ್ ಮತ್ತು ಅಣ್ಣಪ್ಪ ಮೇಸ್ತಾ. ಆರೋಪಿಯು ನಮ್ಮ ಸಂಸ್ಥೆಯಲ್ಲಿ ಯಾವ ದಿನಾಂಕದಂದು ಸದಸ್ಯತ್ವ ಪಡೆದದ್ದು ಎಂದು ನಾನು ನೋಡಿ ಹೇಳಬೇಕು. ಆರೋಪಿ ನಮ್ಮ ಸಂಸ್ಥೆಯಲ್ಲಿ ಸದಸ್ಯತ್ವ ಪಡೆದೆ ಇಲ್ಲ ಹಾಗೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ನಮ್ಮ ಸಂಸ್ಥೆಯಲ್ಲಿ ಸಾಲಕ್ಕೆ ಅರ್ಜಿ ನೀಡಿದಾಗ ಸಾಲಕ್ಕೆ ಅರ್ಜಿ ಹಾಕಿದವರು ಪೂರ್ವಪರ ವಿಚಾರಿಸುತ್ತೇವೆ ಎಂದರೆ ಸರಿ. ಆರೋಪಿಯ ಆಸ್ತಿಯ ವಿವರಗಳನ್ನು ಹೇಳಲು ನಾನು ನೋಡಿ ಹೇಳಬೇಕು. ನಮ್ಮ ಸಂಸ್ಥೆಯಲ್ಲಿ ಸಾಲ ಮಂಜೂರಾತಿ ಮಾಡುವ ಮುಂಚೆ ಮೀಟಿಂಗ್ ಮಾಡುತ್ತಾರೆ

ಎಂದರೆ ಸರಿ. ನಮ್ಮ ಸಂಸ್ಥೆಯ ಎಲ್ಲ ನಿರ್ದೇಶಕರು ಆ ಮೀಟಿಂಗ್ ನಲ್ಲಿ ಹಾಜರಾಗುತ್ತಾರೆ ಎಂದರೆ ಸರಿ. ಆರೋಪಿಗೆ ಯಾವ ದಿನಾಂಕದಂದು ಸಾಲ ಮೀಟಿಂಗ್ ನಲ್ಲಿ ಮಂಜೂರಾಯಿತು ಎಂದು ನೆನಪಿಲ್ಲ.

**ಮುಂದುವರಿದ ಪಾಟೀ ಸವಾಲುಃ** ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.